# ೨ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.

## ಸಿ.ಸಿ. 775/2021

ಸಾಕ್ಷಿದಾರರ ಹೇಳಿಕೆ ಃ

| | | |
|---|---|---|
| ಹೆಸರು | ಃ ಮಹದೇವ | ಚಾಸಾಃ **12** ಪ್ರಾಸಾಃ **7** |
| ತಂದೆಯ ಹೆಸರು | ಃ ಲೇಟ್ ಚೌಡಶೆಟ್ಟಿ | |
| ವಯಸ್ಸು | ಃ 59 ವರ್ಷ | |
| ವೃತ್ತಿ | ಃ ಪಿ.ಎಸ್.ಐ., ಪಾಂಡವಪುರ ಪೊ.ಠಾ. | |
| ವಾಸಸ್ಥಳ | ಃ ಮೈಸೂರು . | |

ದಿನಾಂಕಃ **07.08.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01.** ನಾನು 2017 ರಿಂದ ಜೂನ್ 2022 ರವರೆಗೆ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ.ಆಗಿ ಕರ್ತವ್ಯ ನಿರ್ವಹಿಸಿದ್ದೇನು.

**02**. ದಿನಾಂಕಃ 14.04.2021 ರಂದು ನಾನು ಠಾಣಾ ಕರ್ತವ್ಯದಲ್ಲಿರುವಾಗ ಮದ್ಯಾಹ್ನ 12.30 ಕ್ಕೆ ಚಾ.ಸಾ-1 ರವರು ನನ್ನ ಮುಂದೆ ಹಾಜರಾಗಿ ನೀಡಿದ ಟೈಪಡ್ ದೂರನ್ನು ಪಡೆದು, ಠಾಣಾ ಮೊ.ಸಂಖ್ಯೆಃ 149/2021 ರಲ್ಲಿ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ, ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನಕಲನ್ನು ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

**03**. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ**-1(**ಬಿ**)** ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ**-10** ಎಂದು, ಸಾಕ್ಷಿಯ ಸಹಿಯನ್ನು ನಿಪಿ**-10(**ಎ**)** ಎಂದು ಗುರುತಿಸಲಾಯಿತು. ದಿನಾಂಕಃ 14.04.2021 ರಂದು ಮದ್ಯಾಹ್ನ 3.00 ರಿಂದ 4.00 ರ ಸಮಯದವರೆಗೆ ಚಾ.ಸಾ-1 ರವರು ತೋರಿಸಿದ ಕೃತ್ಯ ಸ್ಥಳದಲ್ಲಿ ಚಾ.ಸಾ-6 ಮತ್ತು 7 ರವರ ಸಮಕ್ಷಮ ಕೃತ್ಯ ಸ್ಥಳ ಪಂಚನಾಮ ಕ್ರಮ ಕೈಗೊಂಡು, ಪಂಚರುದಾರರ ಸಹಿ ಪಡೆದಿರುತ್ತೇನೆ. ಪಂಚರಿಗೆ ಲಿಖಿತ ನೋಟೀಸನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಸಾಕ್ಷಿಯು ನಿಪಿ-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ**-3(**ಬಿ**)** ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟೀಸನ್ನು ಈಗ ನಿಪಿ**-11** ಎಂದು, ಸಾಕ್ಷಿಯ ಸಹಿಯನ್ನು ನಿಪಿ**-11(**ಎ**)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ಮತ್ತು 5 ಪೋಟೋವನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಬೈಕ್ ಅಮಾನತ್ತು ಮಹಜರ್ ಅನ್ನು ಠಾಣೆಯಲ್ಲಿ ಪಂಚರಾದ ಚಾ.ಸಾ-8 ಮತ್ತು 9 ರವರ ಸಮಕ್ಷಮ ಜರುಗಿಸಿ ವಾಹನವನ್ನು ವಶಕ್ಕೆ ಪಡೆದಿರುತ್ತೇನೆ. ಸದರಿ ಪಂಚನಾಮೆಯನ್ನು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ**-9(**ಬಿ**)** ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾ.ಸಾ-3 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

**04**. ದಿಃ22.04.2021 ರಂದು ವಾಹನ ಸಂಖ್ಯೆ ಕೆ.ಎ-11 ಇ.ಆರ್.6556 ಮಾಲೀಕರಾದ ಕುಮಾರ್ ಗೆ ಕಲಂ 133 ಐ.ಎಂ.ವಿ. ಅಡಿಯಲ್ಲಿ ನೋಟೀಸ್ ನೀಡಿರುತ್ತೇನೆ. ಸದರಿ ನೋಟೀಸನ್ನು ಈಗ ನಿಪಿ**-12** ಎಂದು, ಸಾಕ್ಷಿಯ ಸಹಿಯನ್ನು ನಿಪಿ**-12(**ಎ**)** ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿಗಳಿಗೆ ಕಲಂ 41(ಎ) ಸಿ.ಆರ್.ಪಿ.ಸಿ. ಅಡಿಯಲ್ಲಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟಿಸನ್ನು ನಿಪಿ**-13** ಎಂದು, ಸಾಕ್ಷಿಯ

ಸಹಿಯನ್ನು ನಿಪಿ-**13(ಎ)** ಎಂದು ಗುರುತಿಸಲಾಯಿತು. ದಿಃ12.05.2021 ರಂದು Indemnity Bond ಪಡೆದು ವಾಹನವನ್ನು ಕುಮಾರ್ ರವರ ವಶಕ್ಕೆ ನೀಡಿರುತ್ತೇನೆ. ಸದರಿ Indemnity Bond ಅನ್ನು ಈಗ ನಿಪಿ-**14** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**14(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯ ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**15** ಮತ್ತು **16** ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಚಾ.ಸಾ-13 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಾದ ಶ್ರೀ ಎಸ್.ಡಿ.ಎಲ್.ರವರಿಂದ ಃ</u>

**1**. ಪ್ರ.ವ.ವ. ದಾಖಲಿಸಿದ ನಂತರ ಸ್ಥಳಕ್ಕೆ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಕುಳಿತು ಮಹಜರ್ ಕ್ರಮಗಳನ್ನು ಜರುಗಿಸಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ-1 ರವರು ಯಾವುದೇ ದೂರನ್ನು ನೀಡದಿದ್ದರು ಮೃತನ ಕುಟುಂಬಕ್ಕೆ ಅನುಕೂಲವಾಗಲೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸೃಷ್ಟಿಸಿ ಮೇಲಾಧಿಕಾರಿಗಳು ಅಂತಿಮ ವರಿದಿ ಸಲ್ಲಿಸಲು ಅನುಕೂಲಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

**(**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**)**

ಓ. ಹೇ. ಕೇ. ಸ. ಇದೆ.

**C/C 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಪಾಂಡವಪುರ.

ಸಾಕ್ಷಿದಾರರ ಸಹಿ.